ಟೈಪ್‌ರೈಟಿಂಗ್ ಇನ್ಸ್ಟಿಟ್ಯೂಟ್‌ಗಳಿಗೆ ಕಾಯಕಲ್ಪ

627(796): ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ)

ಅ) ಸರ್ಕಾರದ ಆಡಳಿತ ವ್ಯವಸ್ಥೆಯಲ್ಲಿ ಬಹುಮುಖ್ಯ ಪಾತ್ರವನ್ನು ನಿರ್ವಹಿಸುತ್ತಿದ್ದ ಟೈಪಿಸ್ಟ್ ಮತ್ತು ಸ್ಟೆನೋಗ್ರಾಫರ್‌ಗಳನ್ನು ಶಿಕ್ಷಣ ನೀಡಿ ಸಿದ್ಧಗೊಳಿಸುತ್ತಿದ್ದ ಟೈಪ್‌ರೈಟಿಂಗ್ ಇನ್ಸ್ಟಿಟ್ಯೂಟ್‌ಗಳು ಬಹುತೇಕ ಮುಚ್ಚುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಹಾಗಿದ್ದಲ್ಲಿ, ಆ ಕುರಿತು ರೂಪಿಸಿದ ಪರ್ಯಾಯ ಕ್ರಮಗಳೇನು;

ಆ) ಟೈಪ್‌ರೈಟಿಂಗ್ ಇನ್ಸ್ಟಿಟ್ಯೂಟ್‌ಗಳಿಗೆ ಕಾಯಕಲ್ಪ ನೀಡಲು ಸರ್ಕಾರದ ನಿರ್ಣಯದ ಕ್ರಮಗಳೇನು; ಈ ಕುರಿತು ವಾಣಿಜ್ಯ ಶಾಲೆಗಳ ಸಂಘದ ಬೇಡಿಕೆಯೇನು; ಈ ಬಗ್ಗೆ ಸರ್ಕಾರ ಕೈಗೊಂಡ ಕ್ರಮಗಳೇನು;

ಇ) ಟೈಪ್‌ರೈಟಿಂಗ್ ಒಳಗೊಂಡಂತೆ ಕಂಪ್ಯೂಟರ್ ಶಿಕ್ಷಣ ಕೋರ್ಸ್‌ಗೆ ಸೂಕ್ತ ಪಠ್ಯಪುಸ್ತಕ ಮತ್ತು ಪಠ್ಯಕ್ರಮಗಳನ್ನು ಸಿದ್ಧಪಡಿಸಿ 2000ನೇ ಇಸವಿಯಲ್ಲಿ ಸಂಬಂಧಪಟ್ಟವರು ಸರ್ಕಾರಕ್ಕೆ ಸಲ್ಲಿಸಿದ್ದರೂ ಆ ಕುರಿತಾದ ಅನುಷ್ಠಾನ ಕ್ರಮ ವಿಳಂಬವಾಗಲು ಕಾರಣಗಳೇನು;

ಈ) ರಾಜ್ಯದಲ್ಲಿರುವ ನೋಂದಾಯಿತ ವಾಣಿಜ್ಯ ಶಾಲೆಗಳ ಸಂಖ್ಯೆ ಎಷ್ಟು (ಜಿಲ್ಲಾವಾರು ವಿವರ ನೀಡುವುದು); ಬಡ ಮಧ್ಯಮ ವರ್ಗದವರಿಗೆ ಉದ್ಯೋಗ ಶಿಕ್ಷಣ ನೀಡುತ್ತಿರುವ ಈ ವಾಣಿಜ್ಯ ಸಂಸ್ಥೆಗಳಿಗೆ ನೆರವು ಮತ್ತು ಸಬಲೀಕರಣಗೊಳಿಸುವಲ್ಲಿ ಸರ್ಕಾರದ ನಿಲುವುಗಳೇನು?

ಶ್ರೀ ಕಿಮ್ಮನೆ ರತ್ನಾಕರ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು)

ಅ) ಬಂದಿದೆ. ಬೆರಳಚ್ಚು ಮತ್ತು ಶೀಘ್ರಲಿಪಿ ವಿಷಯಗಳ ಜೊತೆಗೆ ಗಣಕಯಂತ್ರ ಶಿಕ್ಷಣ ಅಳವಡಿಸಿಕೊಂಡು ಅಭಿವೃದ್ಧಿಗೊಳಿಸಲು ಕ್ರಮ ತೆಗೆದುಕೊಳ್ಳಲಾಗುತ್ತಿದೆ.

ಆ) ಗಣಕ ಯಂತ್ರದ ಮೂಲಕ ಉತ್ತಮಪಡಿಸಲಾಗುತ್ತಿದೆ ಮತ್ತು ಅಲ್ಪಾವಧಿ ಬೆರಳಚ್ಚು ತರಬೇತಿ ನೀಡುವ ಬಗ್ಗೆ ಕ್ರಮ ಕೈಗೊಳ್ಳಲಾಗಿದೆ.

ಇ) ಗಣಕ ಯಂತ್ರ ಪಠ್ಯ ಪುಸ್ತಕ ಸರ್ಕಾರದಿಂದ ಅನುಮೋದಿತವಾಗಿ ಮುದ್ರಣಗೊಂಡಿದೆ. ಅಲ್ಪಾವಧಿ ಬೆರಳಚ್ಚು ತರಬೇತಿ ಪಠ್ಯಪುಸ್ತಕವನ್ನು ಮುದ್ರಿಸಲು ಡಿ.ಎಸ್.ಇ.ಆರ್.ಟಿ.ಗೆ ಸಲ್ಲಿಸಲಾಗಿದೆ. ಮುದ್ರಣಾ ಹಂತದಲ್ಲಿದೆ.

ಈ) ಜಿಲ್ಲಾವಾರು ನೋಂದಾಯಿತವಾಗಿರುವ ವಾಣಿಜ್ಯ ಶಾಲೆಗಳ ಪಟ್ಟಿಯನ್ನು ಇದರೊಂದಿಗೆ ಲಗತ್ತಿಸಿದೆ. ಯಾವುದೇ ಆರ್ಥಿಕ ಸಹಾಯಕ ನೀಡುತ್ತಿಲ್ಲ.

ರಾಜ್ಯದಲ್ಲಿ ನೋಂದಣಿ ಪಡೆದಿರುವ ಜಿಲ್ಲಾವಾರು ವಾಣಿಜ್ಯ ಶಾಲೆಗಳ ಸಂಖ್ಯೆ:

ಬೆಂಗಳೂರು ವಿಭಾಗ		
01	ಬೆಂಗಳೂರು ನಗರ	115
02	ಬೆಂಗಳೂರು ಗ್ರಾಮಾಂತರ ಜಿಲ್ಲೆ	02
03	ಕೋಲಾರ ಜಿಲ್ಲೆ	25
04	ತುಮಕೂರು ಜಿಲ್ಲೆ	08
05	ಚಿತ್ರದುರ್ಗ ಜಿಲ್ಲೆ	15
06	ಶಿವಮೊಗ್ಗ ಜಿಲ್ಲೆ	23
07	ಚಿಕ್ಕಬಳ್ಳಾಪುರ ಜಿಲ್ಲೆ	04
	ಒಟ್ಟು	**192**

ಮೈಸೂರು ವಿಭಾಗ		
01	ಮೈಸೂರು ಜಿಲ್ಲೆ	18
02	ಮಂಗಳೂರು (ದ.ಕ)	07
03	ಹಾಸನ ಜಿಲ್ಲೆ	11
04	ಚಾಮರಾಜನಗರ ಜಿಲ್ಲೆ	07
05	ಚಿಕ್ಕಮಗಳೂರು ಜಿಲ್ಲೆ	08

06	ಮಂಡ್ಯ ಜಿಲ್ಲೆ	07
07	ಮಡಿಕೇರಿ	0
08	ಉಡುಪಿ ಜಿಲ್ಲೆ	03
	ಒಟ್ಟು	**61**

ಗುಲ್ಬರ್ಗಾ ವಿಭಾಗ		
01	ಗುಲ್ಬರ್ಗಾ ಜಿಲ್ಲೆ	39
02	ಬಳ್ಳಾರಿ ಜಿಲ್ಲೆ	21
03	ಬೀದರ್ ಜಿಲ್ಲೆ	18
04	ಯಾದಗಿರಿ ಜಿಲ್ಲೆ	12
05	ರಾಯಚೂರು ಜಿಲ್ಲೆ	18
06	ಕೊಪ್ಪಳ ಜಿಲ್ಲೆ	11
	ಒಟ್ಟು	**119**

ಬೆಳಗಾಂ ವಿಭಾಗ		
01	ಬೆಳಗಾಂ ಜಿಲ್ಲೆ	13
02	ಚಿಕ್ಕೋಡಿ ಜಿಲ್ಲೆ	12
03	ಬಿಜಾಪುರ ಜಿಲ್ಲೆ	11
04	ಬಾಗಲಕೋಟೆ ಜಿಲ್ಲೆ	18
05	ಧಾರವಾಡ ಜಿಲ್ಲೆ	1
06	ಗದಗ ಜಿಲ್ಲೆ	11
07	ಹಾವೇರಿ ಜಿಲ್ಲೆ	04
08	ಕಾರವಾರ	14
	ಒಟ್ಟು	**110**